ಗಣೇ. ಪ್ರೇಯಸಿಯೆಂದರೂ ನನಗೆ ಹೆಂಡತಿಯೇ. ಮನದೊಳಗಿನ ಒಲವನ್ನು ನಾನು ಬಣ್ಣಬಣ್ಣದ ಮಾತುಗಳಲ್ಲಿ ಹೇಳಲಾರೆ. ಥಟ್ಟೆಂದು ಜೋಕುಗಳ ಹೇಳಿ ನಗಿಸಲಾರೆ. ನನ್ನಂತಹ ಅಸಮರ್ಥನಿಗೆ ನಶೆ ತುಂಬಿದ ಈ ಸ್ವಪ್ನ ಲೋಕದಲ್ಲಷ್ಟೇ ಶಾಂತಿ!''

ಮಾತು, ನಿರ್ಧಾರಗಳೆಲ್ಲಾ ಇಲ್ಲಿಗೇ ಮುಗಿದುಹೋಯಿತೆಂಬಂತೆ ನಿಶ್ಶಬ್ದವಾಗಿ ಬಾಟಲಿಯಿಂದ ವಿಸ್ಕಿಯನ್ನು ಬಗ್ಗಿಸಲೆಂದು ಚಾಚಿದ ನನ್ನ ಕೈಯನ್ನು ಅರ್ಧದಲ್ಲೇ ತಡೆಯುತ್ತ ಗಣೇಶ ಹೇಳಿದ:

``ಆವರಣದಿಂದ ಆಚೆ ಬಾ ಗೆಳೆಯಾ!''

``ಸುಮಾ ನಿನ್ನನ್ನು ಬಿಟ್ಟು ಇನ್ಯಾರನ್ನೋ ಒಪ್ಪಿದಳು ಎಂದೋ, ಮತ್ಯಾವುದೋ ಹುಡುಗಿ ನಿನ್ನನ್ನು ತಿರಸ್ಕರಿಸಿದಳು ಎಂದೋ ನಿನ್ನನ್ನು ನೀನೇ ಕೀಳಾಗಿ ಕಾಣುವುದು ಸರಿ ಅಲ್ಲ ಸಾತ್ವಿಕ್. ನಿನಗೊಂದು ವಿಷಯ ಗೊತ್ತೇ? ಮನುಷ್ಯ ಯಾವತ್ತೂ ತನ್ನ ಲಾಭಕ್ಕೆ ತಕ್ಕಂತೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ಸುಮಾಳಿಗೆ ಮಂಜುನಾಥನಲ್ಲಿ ಖುಷಿ ಕಂಡಿದೆ. ವೈಶಾಲಿಗೆ ಇನ್ಯಾರಲ್ಲೋ ನಗು ಕಾಣಬಹುದು. ಹೀಗೆ ಅವರವರ ಮನಃಸ್ಥಿತಿಗೆ, ಅವಶ್ಯಕತೆಗೆ ತಕ್ಕಂತೆ ಅವರಿಟ್ಟ ಹೆಜ್ಜೆಗಳಲ್ಲಿ ನಿನ್ನ ಬಗೆಗಿನ ಯೋಚನೆಯಿಲ್ಲವೆಂದ ಮಾತ್ರಕ್ಕೆ ಅದು ನಿನ್ನದೇ ತಪ್ಪೆಂದು, ನೀನು ಅಸಮರ್ಥನೆಂದು ಕೊರಗಬಾರದು. ಬದಲಾದ ಸಮಯದಲ್ಲಿ ಅವರ ಖುಷಿಗೆ, ಅವರ ಸುಖಕ್ಕೆ ಅವರು ನಿನ್ನನ್ನು ಬಿಟ್ಟು ಇನ್ಯಾರನ್ನೋ ಆಯ್ದುಕೊಂಡ ಮಾತ್ರಕ್ಕೆ ನಿನ್ನ ಬದುಕಿನ ಖುಷಿಗಳೆಲ್ಲವೂ ಸ್ಥಗಿತವಾಗಬಾರದು. ಸೆಲ್ಫ್ ಎಸ್ಟೀಮ್‌ನ ಬಗ್ಗೆ ಕೇಳಿದ್ದೀಯಾ? ನಿನ್ನ ಖುಷಿ, ನಿನ್ನ ನಗುಗಳು ಇನ್ಯಾರದೋ ಒಪ್ಪಿಗೆ, ನಿರಾಕರಣೆ, ಹಾಜರಿ, ಗೈರುಗಳನ್ನು ಅವಲಂಬಿಸಬಾರದು!''

ಗ್ಲಾಸಿನ ಬುಡದಲ್ಲುಳಿದ ಪೇಯವನ್ನು ಗಂಟಲಿಗಿಳಿಸಿಕೊಂಡು ಮಾತು ಮುಂದುವರೆಸಿದ.

``ಅತ್ತಿಯ ಹಣ್ಣನ್ನು ತಿನ್ನಲು ಅಳಿಲು ಬರುತ್ತದೆ. ಮಲ್ಲಿಗೆ ಹೂವಿಗೆ ದುಂಬಿ ಬರುತ್ತದೆ. ಅಳಿಲು ಬರಲಿಲ್ಲವೆಂದು ಮಲ್ಲಿಗೆ, ದುಂಬಿ ಬರಲಿಲ್ಲವೆಂದು ಅತ್ತಿಹಣ್ಣು ಕೊರಗಿದರೆ ಅದು ಮೂರ್ಖತನ! ಪ್ರತಿಯೊಂದು ಸೃಷ್ಟಿಯ ಹಣೆಯಲ್ಲೂ ಒಂದಿಲ್ಲೊಂದು ಹೆಸರು ಬರೆದೇ ಇದೆ. ನಿನ್ನನ್ನು ನೀನು ಇರುವಂತೆಯೇ ಒಪ್ಪುವವಳೇ ನಿಜವಾದ ಸಂಗಾತಿ. ಕೃತಕವಾಗಿ ಬದಲಾದ ನಿನ್ನನ್ನು ಒಪ್ಪಿ, ಅಪ್ಪುವ ಪ್ರೀತಿ ಹೆಚ್ಚುಕಾಲ ಉಳಿಯಲಾರದು. ನಾಳೆ ವೈಶಾಲಿ ಏನು ಹೇಳುತ್ತಾಳೋ ಗೊತ್ತಿಲ್ಲ. ಆದರೆ, ನಾಳೆಯ ಮಾತುಕತೆ ಮುಗಿದ ಬಳಿಕವೂ ನೀನು ನಗುತ್ತಲೇ ಇರಬೇಕು. ಬದುಕೆಂದರೆ ಒಂದು ತಿರಸ್ಕಾರಕ್ಕೆ ಮುಗಿದುಹೋಗುವುದಲ್ಲ, ಗೆಳೆಯಾ!''

ಮಾತು ಮುಗಿಸಿದ ಗಣೇಶ. ಕೈಯಲ್ಲಿದ್ದ ಗ್ಲಾಸನ್ನು ಮೆಲ್ಲನೆ ಕೆಳಗಿಳಿಸಿದೆ. ಶಹರ ಈಗಷ್ಟೇ ನಿದ್ರೆಯಲ್ಲಿ ಮುಳುಗಿ ನಿಶ್ಶಬ್ದವಾಗಿತ್ತು. ಬರಲಿರುವ ಹೊಸ ದಿನದ ಹೊಸ ಬಿಸಿಲು, ನೆರಳು, ಬೆಂಕಿಗಳಿಗೆ ಮೈಚಾಚಲು ಮನಸ್ಸನ್ನು ಅಣಿಗೊಳಿಸುತ್ತಾ ಹಾಸಿಗೆಯತ್ತ ನಡೆದೆ.

**ವಿನಾಯಕ ಅರಳಸುರಳಿ**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅರಳಸುರಳಿ ಗ್ರಾಮದವರು. ಕುವೆಂಪು ವಿಶ್ವವಿದ್ಯಾಲಯದಿಂದ ವಾಣಿಜ್ಯಶಾಸ್ತ್ರದಲ್ಲಿ ಪದವಿ ಪಡೆದಿದ್ದಾರೆ. ಕೆಲಕಾಲ ಬೆಂಗಳೂರಿನ ಕೆಲವು ಖಾಸಗೀ ಸಂಸ್ಥೆಗಳ ಅಕೌಂಟ್ಸ್ ವಿಭಾಗದಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ತಮ್ಮ ಹಳ್ಳಿಯಲ್ಲಿ ಕೃಷಿಯಲ್ಲಿ ತೊಡಗಿದ್ದಾರೆ.